**NOVEMBER 26, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **'ನಮ್ಮ ಸಂವಿಧಾನ, ನಮ್ಮ ಸ್ವಾಭಿಮಾನ' ಧ್ಯೇಯದೊಂದಿಗೆ, 75ನೇ ಸಂವಿಧಾನ ವಾರ್ಷಿಕೋತ್ಸವಕ್ಕೆ ಇಂದು, ಚಾಲನೆ.**
- **ಪ್ರಜಾಪ್ರಭುತ್ವ ದಿನಾಚರಣೆ; ಸಾಧಕ ಜಿಲ್ಲೆಗಳಾದ, ಧಾರವಾಡ, ತುಮಕೂರು ಹಾಗೂ ಚಾಮರಾಜನಗರಕ್ಕೆ, ಮುಖ್ಯಮಂತ್ರಿಯವರಿಂದ, ಇಂದು ಪ್ರಶಸ್ತಿ ಪ್ರದಾನ.**
- **ಗ್ರಾಮ ಪಂಚಾಯ್ತಿಗಳ ಅರಿವು ಕೇಂದ್ರಗಳಲ್ಲಿ, ಪುಸ್ತಕದ ಗೂಡು, ಮಾದರಿ ಕಾರ್ಯ – ಪ್ರಿಯಾಂಕ ಖರ್ಗೆ.**
- **ರಂಗನತಿಟ್ಟು ಪಕ್ಷಿಧಾಮದಲ್ಲಿ, ಚಿಟ್ಟೆ ಉದ್ಯಾನ ನಿರ್ಮಾಣ – ಈಶ್ವರ ಖಂಡ್ರೆ.**

<><><>

**ಈಗ ವಾರ್ತೆಗಳ ವಿವರ**

<><><>

**ಭಾರತ, ಸಂವಿಧಾನವನ್ನು ಅಳವಡಿಸಿಕೊಂಡು, 75 ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆ, ದೇಶಾದ್ಯಂತ ವರ್ಷ ಪೂರ್ತಿ ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಸಂಭ್ರಮಾಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. 'ಹಮಾರಾ ಸಂವಿಧಾನ್, ಹಮಾರಾ ಸ್ವಾಭಿಮಾನ್' ಧ್ಯೇಯವಾಗಿದೆ.**

<><><>

**ಪೂರಕವಾಗಿ, ರಾಜ್ಯ ಸರ್ಕಾರಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು, ಸಂವಿಧಾನ ದಿನಾಚರಣೆ ಹಾಗೂ ವಾರ್ಷಿಕೋತ್ಸವಕ್ಕೆ ಇಂದು ಚಾಲನೆ ನೀಡಲಿವೆ.**

<><><>

ಹೊಸ ದಿಲ್ಲಿಯ ಸಂವಿಧಾನ ಸದನದಲ್ಲಿ ಇಂದು ಬೆಳಗ್ಗೆ 10.55ಕ್ಕೆ ನಡೆಯಲಿರುವ ಕಾರ್ಯಕ್ರಮವನ್ನು, ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಲಿದ್ದಾರೆ.

<><><>

ದೇಶದ ಪ್ರತಿ ಜಿಲ್ಲೆ, ಗ್ರಾಮಗಳಲ್ಲಿ ಸಂವಿಧಾನ ದಿನ ಆಚರಿಸಲಾಗುತ್ತಿದೆ. ಸಂವಿಧಾನದ ಪ್ರಸ್ತಾವನೆಯನ್ನು ಓದುವುದು ಮತ್ತು ಸರಳ ಭಾಷೆಯಲ್ಲಿ ಸಂವಿಧಾನವನ್ನು ಜನರಿಗೆ ತಲುಪಿಸುವುದು, ಸರ್ಕಾರದ ಉದ್ದೇಶವಾಗಿದೆ.

<><><>

ನಮ್ಮ ಸಂವಿಧಾನ ಪ್ರಜಾಪ್ರಭುತ್ವದ ಅತಿದೊಡ್ಡ ಶಕ್ತಿಯಾಗಿದ್ದು, ದೇಶದಲ್ಲಿ ಸಂವಿಧಾನದ ಕೊಡುಗೆ ಅಮೂಲ್ಯವಾಗಿದೆ.

ಈ ಹಿಂದೆ ನವೆಂಬರ್ 26ನ್ನು ಕಾನೂನು ದಿನವನ್ನಾಗಿ ಆಚರಿಸಲಾಗುತ್ತಿತ್ತು. 2015 ರಿಂದ ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತಿದೆ. ಸಂವಿಧಾನದ ಮೌಲ್ಯಗಳ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು, ಸಂವಿಧಾನ ದಿನಾಚರಣೆ ಆಶಯವಾಗಿದೆ.

<><><>

ರಾಜ್ಯದ 31 ಜಿಲ್ಲೆಗಳಲ್ಲಿ ಇಂದು ಸಂವಿಧಾನ ದಿನಾಚರಣೆ ವಿಶೇಷ ಕಾರ್ಯಕ್ರಮಗಳು ಆಯೋಜನೆಗೊಂಡ, ಮುನ್ಸುದ್ದಿಗಳು ಬಂದಿವೆ.

<><><>

ಅಂತಾರಾಷ್ಟ್ರೀಯ ಮಹಿಳಾ ಶೋಷಣೆ ನಿವಾರಣಾ ದಿನಾಚರಣೆ ಅಂಗವಾಗಿ, ‘ಅಬ್ ಕೋಯಿ ಬಹನಾ ನಹಿ’ ಎಂಬ ರಾಷ್ಟ್ರೀಯ ಅಭಿಯಾನವನ್ನು, ಕೇಂದ್ರ ಸರ್ಕಾರ ಪ್ರಾರಂಭಿಸಿದೆ. ಲಿಂಗ-ಆಧಾರಿತ ಹಿಂಸಾಚಾರವನ್ನು ತೊಡೆದುಹಾಕಲು, ಕ್ರಿಯಾಶೀಲ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಭಿಯಾನವು ಸಾರ್ವಜನಿಕರು, ಸರ್ಕಾರ ಮತ್ತು ಪ್ರಮುಖ ಮಧ್ಯಸ್ಥಗಾರರಿಗೆ ಕರೆ ನೀಡಿದೆ. ಈ ಕುರಿತು ವಿಶೇಷ ಚಲನಚಿತ್ರವನ್ನು ಬಿಡುಗಡೆ ಮಾಡಿದೆ.

<><><>

ಮಹಿಳೆಯರ ವಿರುದ್ಧದ ಹಿಂಸೆಯನ್ನು ತೊಡೆದು ಹಾಕಲು, ಮಹಿಳೆಯರಲ್ಲಿ ಆತ್ಮಸ್ಥೈರ್ಯ ತುಂಬಿ, ಹಿಂಸೆಯ ವಿರುದ್ಧ ಧೈರ್ಯದಿಂದ ಧ್ವನಿ ಎತ್ತುವಂತೆ, ಜಾಗ್ರತಿ ಮೂಡಿಸಲು, ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ನಿರ್ಣಯದಂತೆ, ಈ ಅಭಿಯಾನ ಡಿಸೆಂಬರ್ 10ರ ವರೆಗೆ ನಡೆಯಲಿದೆ.

<><><>

ಚಾಮರಾಜನಗರ ಜಿಲ್ಲೆಯಲ್ಲಿ, ಕಳೆದ ಸೆಪ್ಟೆಂಬರ್ 15 ರಂದು, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಹಿನ್ನೆಲೆ, 2 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟಿದ್ದು, ಜಿಲ್ಲೆಗೆ ಪ್ರಥಮ ಸ್ಥಾನ ದೊರೆತಿದೆ. ಇದು ಇಡೀ ಜಿಲ್ಲೆಗೆ ಹೆಮ್ಮೆಯ ವಿಷಯ ಎಂದು ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

<><><>

ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಭಾಗವಹಿಸಲು, ಧಾರವಾಡ ಜಿಲ್ಲೆಯಿಂದ ಅತೀ ಹೆಚ್ಚು ಜನ, ಆನ್‌ಲೈನ್‌ನಲ್ಲಿ ತಮ್ಮ ಹೆಸರು ನೋಂದಾಯಿಸಿದ ಹಿನ್ನೆಲೆ, ಧಾರವಾಡ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದೆ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಹೇಳಿದ್ದಾರೆ.

<><><>

90 ಕಿಲೋ ಮೀಟರ್ ಉದ್ದದ, ಬೃಹತ್ ಮಾನವ ಸರಪಳಿ ನಿರ್ಮಿಸಿ, ರಾಜ್ಯಕ್ಕೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಸೇರಿ, ವಿವಿಧ ವಿಭಾಗಗಳಲ್ಲಿ, 2 ಪ್ರಶಸ್ತಿಗಳಿಗೆ ತುಮಕೂರು ಭಾಜನವಾಗಿದೆ.

ಇಂದು, ಬೆಂಗಳೂರಿನ ಬಿ.ಆರ್. ಅಂಬೇಡ್ಕರ್ ಭವನದಲ್ಲಿ, ಬೆಳಗ್ಗೆ 11 ಗಂಟೆಗೆ ಆಯೋಜಿತ, ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿಯವರು, ಮೂವರು ಜಿಲ್ಲಾಧಿಕಾರಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ ತುಮಕೂರು ಜಿಲ್ಲಾಧಿಕಾರಿ ಸುಭಾ ಕಲ್ಯಾಣ್ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಜಿಲ್ಲಾಧಿಕಾರಿ ಸುಭಾ ಕಲ್ಯಾಣ್ ಧ್ವನಿ 46 ಸೆಕೆಂದುಗಳು

<><><>

ಸರ್ಕಾರಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯಗಳಲ್ಲಿ, ವ್ಯಾಸಂಗ ನಿರತ, ಬೆಳಗಾವಿ ಜಿಲ್ಲೆಯ ಗ್ರಾಮೀಣ ಭಾಗದ, ಆರ್ಥಿಕವಾಗಿ ಹಿಂದುಳಿದ, ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗಾಗಿ, ಜಿಲ್ಲಾಡಳಿತ ಅನು ಙ್ಞನಗೊಳಿಸಿದ, "ಸಿ.ಇ.ಟಿ.–ಸಕ್ಷಮ್" ಎಂಬ, ವಿನೂತನ ಯೋಜನೆಗೆ, ರಾಜ್ಯ ಸರ್ಕಾರ ಮೆಚ್ಚುಗೆ ವ್ಯಕ್ತ ಪಡಿಸಿದೆ. ಜಿಲ್ಲಾ ಪಂಚಾಯ್ತಿ ಸಿ.ಇ.ಓ. ರಾಹುಲ್ ಶಿಂಧೆ ಈ ಕುರಿತು ಮಾಹಿತಿ ನೀಡಿ, 'ಸವಾಲು ನಿಧಿ' ಯೋಜನೆಯಡಿ, ಹತ್ತು ಲಕ್ಷ ರೂಪಾಯಿ ಅನುದಾನ ಲಭಿಸಿದೆ, ಎಂದಿದ್ದಾರೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದ ಹಲವು ಗ್ರಾಮ ಪಂಚಾಯ್ತಿಗಳ, ಅರಿವು ಕೇಂದ್ರಗಳು, ಪುಸ್ತಕದ ಗೂಡುಗಳನ್ನು ನಿರ್ಮಿಸಿ, ಜನರಲ್ಲಿ ಓದುವ ಹವ್ಯಾಸ ಬೆಳೆಸುವಲ್ಲಿ ಯಶಸ್ವಿಯಾಗಿವೆ. ಬಸ್ಸುಗಳಿಗಾಗಿ ಕಾಯುವ ಸಮಯದಲ್ಲಿ, ಪುಸ್ತಕದ ಗೂಡು ಜನರನ್ನು ಆಕರ್ಷಿಸುತ್ತಿದೆ. ಓದಲು ಪ್ರೇರೇಪಿಸುತ್ತಿದೆ. ಇದೊಂದು, ಅತ್ಯುತ್ತಮ ಪ್ರಯೋಗವಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ಶ್ಲಾಘಿಸಿದ್ದಾರೆ. ಅರಿವು ಕೇಂದ್ರಗಳು, ಗ್ರಾಮ ಪಂಚಾಯ್ತಿಗಳು ಆಸಕ್ತಿ ವಹಿಸಿ, ಇಂತಹ ಪುಸ್ತಕ ಗೂಡುಗಳನ್ನು ಹೆಚ್ಚು ಹೆಚ್ಚು ನಿರ್ಮಿಸಬೇಕೆಂದು ಸಚಿವರು, ಸಾಮಾಜಿಕ ಮಾಧ್ಯಮ ಎಕ್ಸ್ ನಲ್ಲಿ, ಪ್ರಕಟಿಸಿದ್ದಾರೆ.

<><><>

ಪ್ರೌಢ ಶಾಲೆ ವಿದ್ಯಾರ್ಥಿನಿ, ಕಲಬುರಗಿ ಜಿಲ್ಲೆ, ಕ್ಯಾತನೇರ ಗ್ರಾಮದ ಸುಚಿತ್ರಾ, ಪುಸ್ತಕದ ಗೂಡಿನ ಬಗ್ಗೆ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸುಚಿತ್ರಾ ಧ್ವನಿ 25 ಸೆಕೆಂದುಗಳು

<><><>

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ, ವಿಶ್ವ ವಿಖ್ಯಾತ ರಂಗನತಿಟ್ಟು ಪಕ್ಷಿಧಾಮದಲ್ಲಿ, ಚಿಟ್ಟೆ ಉದ್ಯಾನ ನಿರ್ಮಿಸಲು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ. ರಂಗನತಿಟ್ಟು ಪಕ್ಷಿಧಾಮದಲ್ಲಿ ಮೂರು ಹೊಸ ವಿಹಾರ ದೋಣಿಗಳನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಬನ್ನೇರುಘಟ್ಟ ಚಿಟ್ಟೆ ಉದ್ಯಾನದ ಮಾದರಿಯಲ್ಲಿ, ರಂಗನತಿಟ್ಟು ಬಟರ್‌ಫ್ಲೈ ಪಾರ್ಕ್ ನಿರ್ಮಿಸಲು ಯೋಜಿಸಲಾಗಿದೆ. ಆನ್‌ಲೈನ್ ಟಿಕೆಟ್ ಬುಕಿಂಗ್ ವ್ಯವಸ್ಥೆ ಸಹ ಜಾರಿಗೆ ಬರಲಿದೆ ಎಂದು, ಸಚಿವರು ತಿಳಿಸಿದರು.

<><><>

ನಗರೀಕರಣದ ಹಿನ್ನೆಲೆ, ದೂರವಾಗುತ್ತಿರುವ ಗುಬ್ಬಚ್ಚಿಗಳ ಬಗ್ಗೆ, ಆಕಾಶವಾಣಿಯ, ಜನಪ್ರಿಯ, 116 ನೇ ಅವೃತ್ತಿಯ, ಮನದ ಮಾತಿನಲ್ಲಿ, ಉಲ್ಲೇಖಿಸಿದ ಪ್ರಧಾನಮಂತ್ರಿಯವರು, ಮೈಸೂರಿನ 'ಅರ್ಲಿ ಬರ್ಡ್' ಅಭಿಯಾನದ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ. ಕಳೆದ ಒಂದು ದಶಕದಿಂದ ಧಾರವಾಡದಲ್ಲಿ, ಪಕ್ಷಿಮಿತ್ರ ಆರ್.ಜಿ. ತಿಮ್ಮಾಪೂರ, ಈ ವರೆಗೆ ಸಾವಿರಾರು ಸಂಖ್ಯೆಯಲ್ಲಿ ಗೂಡುಗಳನ್ನು ಹಂಚಿ, ಮನೆ ಅಂಗಳದಲ್ಲಿ ಗುಬ್ಬಚ್ಚಿಗೆ ಸೂರು ಒದಗಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ನಿವೃತ್ತ ಪ್ರಧಾನ ಶಿಕ್ಷಕ, ನೇಚರ್ ರಿಸರ್ಚ್ ಸೆಂಟರ್ ವಿಶ್ವಸ್ಥ, ಆರ್.ಜಿ. ತಿಮ್ಮಾಪೂರ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಪಕ್ಷಿಮಿತ್ರ ಆರ್.ಜಿ. ತಿಮ್ಮಾಪೂರ ಧ್ವನಿ 40 ಸೆಕೆಂದುಗಳು

<><><>

ಪೊಲೀಸ್ ಇಲಾಖೆಯಲ್ಲಿ, ಕ್ರೀಡಾಪಟುಗಳಿಗೆ ಶೇಕಡ ಮೂರರ ್ಟ ಮೀಸಲಾತಿ ಕಲ್ಪಿಸಲಾಗಿದ್ದು, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳು, ಪಿ.ಎಸ್.ಐ. ಹುದ್ದೆಗೆ ನೇರ ನೇಮಕಾತಿ ಗೊಳ್ಳಬಹುದು ಎಂದು, ಐ.ಜಿ.ಪಿ. ಬಿ. ಎಸ್. ಲೋಕೇಶಕುಮಾರ ಹೇಳಿದ್ದಾರೆ. ವಿಜಯನಗರದ ಜಿಲ್ಲಾ ಮೀಸಲು ಪೊಲೀಸ್ ಪಡೆಯ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ, ಪೊಲೀಸ್ ಇಲಾಖೆಯ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಕ್ರೀಡೆ ಎಂಬುದು ಪೊಲೀಸ್ ಇಲಾಖೆಯ ಅವಿಭಾಜ್ಯ ಅಂಗ. ಹಾಗಾಗಿ ಪೊಲೀಸರು ದೈಹಿಕ ಮತ್ತು ಮಾನಸಿಕ ಸುದೃಢತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

<><><>

ಕೊಚ್ಚಿನ್‌ನ, ಭಾರತೀಯ ಸಾಂಬಾರು ಮಂಡಳಿ, ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ, ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ, ಸಾಂಬಾರು ಪದಾರ್ಥಗಳ ಖರೀದಿದಾರರ ಮತ್ತು ಮಾರಾಟಗಾರರ ಸಮಾವೇಶವನ್ನು, ಶಾಸಕ ಮಹೇಶ ಟೆಂಗಿನಕಾಯಿ ಉದ್ಘಾಟಿಸಿದರು.

<><><>

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಇಂದು ಬೆಳಗ್ಗೆ 10.30ಕ್ಕೆ 'ಧರೆಗೆ ದೊಡ್ಡವರು' ಕಾರ್ಯಕ್ರಮದಲ್ಲಿ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ, ಲೇಖಕ, ಬೆಂಗಳೂರಿನ ಬೊಳುವಾರ ಮಹಮದ್‌ಕುಂಞ ಹಾಗೂ ಧಾರವಾಡದ ಹಿರಿಯ ಗ್ರಂಥಾಲಯ ವಿಜ್ಞಾನಿ ಎಸ್. ಆರ್.ಗುಂಜಾಳ ಅವರ ಬದುಕು ಮತ್ತು ಕೊಡುಗೆ ಕುರಿತು, ವಿಚಾರ ಸಂಕಿರಣ ಆಯೋಜಿತವಾಗಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬೆಂಗಳೂರಿನ ಬಸವನಗುಡಿಯ, ಇತಿಹಾಸ ಪ್ರಸಿದ್ಧ ಕಡಲೆಕಾಯಿ ಪರಿ ೆಗೆ, ಚಾಲನೆ ದೊರೆತಿದೆ. ರಾಜ್ಯದ ವಿವಿಧ ಬಗೆಯ ಕಡಲೆಕಾಯಿಯನ್ನು ರೈತರು ನೇರವಾಗಿ ಮಾರಾಟ ಮಾಡುತ್ತಿದ್ದಾರೆ.

<><><>

ಕಾರ್ತಿಕ ಮಾಸದ ಕೊನೆಯ ಸೋಮವಾರದ ಪ್ರಯುಕ್ತ, ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ, ಶ್ರೀ ಸಿದ್ಧಾರೂಢರು ಹಾಗೂ ಶ್ರೀ ಗುರುಸಿದ್ಧೇಶ್ವರ ಕಾರ್ತಿಕ ಮಹೋತ್ಸವ ಹರ್ಷೋಲ್ಲಾಸದಿಂದ ಜರುಗಿತು.

<><><>

ಕೊಪ್ಪಳದಲ್ಲಿ ಇಂದು, ಅಗ್ನಿವೀರ ನೇಮಕಾತಿಗೆ ಜಾಥಾ ನಡೆಯಲಿದೆ ಎಂದು, ಬೆಳಗಾವಿ ಸೇನಾ ನೇಮಕಾತಿ ವಿಭಾಗ ತಿಳಿಸಿದೆ.

<><><>

ಧಾರವಾಡದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿನಲ್ಲಿ, ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾಲಯಗಳ, ಮಹಿಳಾ ಬ್ಯಾಡ್ಮಿಂಟನ್ ಪಂದ್ಯಾವಳಿ, ಇಂದಿನಿಂದ 28ರ ವರೆಗೆ, ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ‘ನಮ್ಮ ಸಂವಿಧಾನ, ನಮ್ಮ ಸ್ವಾಭಿಮಾನ’ ಧ್ಯೇಯದೊಂದಿಗೆ, 75ನೇ ಸಂವಿಧಾನ ವಾರ್ಷಿಕೋತ್ಸವಕ್ಕೆ ಇಂದು, ಚಾಲನೆ.
- ಪ್ರಜಾಪ್ರಭುತ್ವ ದಿನಾಚರಣೆ; ಸಾಧಕ ಜಿಲ್ಲೆಗಳಾದ, ಧಾರವಾಡ, ತುಮಕೂರು ಹಾಗೂ ಚಾಮರಾಜನಗರಕ್ಕೆ, ಮುಖ್ಯಮಂತ್ರಿಯವರಿಂದ, ಇಂದು ಪ್ರಶಸ್ತಿ ಪ್ರದಾನ.
- ಗ್ರಾಮ ಪಂಚಾಯ್ತಿಗಳ ಅರಿವು ಕೇಂದ್ರಗಳಲ್ಲಿ, ಪುಸ್ತಕದ ಗೂಡು, ಮಾದರಿ ಕಾರ್ಯ – ಪ್ರಿಯಾಂಕ ಖರ್ಗೆ.
- ರಂಗನತಿಟ್ಟು ಪಕ್ಷಿಧಾಮದಲ್ಲಿ, ಚಿಟ್ಟೆ ಉದ್ಯಾನ ನಿರ್ಮಾಣ – ಈಶ್ವರ ಖಂಡ್ರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ